# ಮನ್ ಕೀ ಬಾತ್

ಸಂಪುಟ 4



# MANN KI BAAT

VOL.4

Script Writers
Sarda Mohan and Shashi Mukherjee

Illustrations and Cover Art
Dilip Kadam

Assistant Artist
Ravindra Mokate

Layout Artist
Tarangini Mukherjee

Edited and Produced by
Amar Chitra Katha

Published by
Amar Chitra Katha Pvt. Ltd

**KANNADA**

ISBN – 978-81-19596-13-3

Amar Chitra Katha Pvt. Ltd, July 2023

© Ministry of Culture, Govt of India, July 2023
All rights reserved. This book is sold subject to the condition that the publication may not be reproduced, stored in a retrieval system (including but not limited to computers, disks, external drives, electronic or digital devices, e-readers, websites), or transmitted in any form or by any means (including but not limited to cyclostyling, photocopying, docutech or other reprographic reproductions, mechanical, recording, electronic, digital versions) without the prior written permission of the publisher, nor be otherwise circulated in any form of binding or cover other than that in which it is published and without a similar condition being imposed on the subsequent purchaser.

You can now get ACK stories as part of your classroom with ACK Learn, a unique learning platform that brings these stories to your school with a range of workshops. Find out more at www.acklearn.com or write to us at acklearn@ack-media.com.



ಯಾರಾದರೂ, ಯಾರಿಗಾದರೂ ಒಳ್ಳೆಯದನ್ನು ಮಾಡಬೇಕೆಂದಿದ್ದರೆ, ಅದಕ್ಕೆ ನಿರ್ದಿಷ್ಟ ವಯಸ್ಸು, ಸಮಯ, ಸ್ಥಳ ಇದ್ಯಾವುದೂ ಮುಖ್ಯವಾಗುವುದಿಲ್ಲ. ಯಾರಿಗಾದರೂ ಉಪಯುಕ್ತವಾದುದನ್ನು ಮಾಡಲು ಪ್ರೇರಣೆ ನಿಮ್ಮೊಳಗಿನಿಂದಲೇ ಬರಬೇಕು. ಆ ಪ್ರೇರಣೆ, ನಾವು ಏನು ಮಾಡಬೇಕೆಂಬುದನ್ನು ನಮಗೆ ಹೇಳುವ ನಮ್ಮೊಳಗಿನ ಒಂದು ಸಣ್ಣ ದನಿಯಾಗಿರುತ್ತದೆ. ಆದರೆ, ಅದಕ್ಕೆಲ್ಲ ಸಮಯವಿಲ್ಲವೆಂದು ಅಥವಾ ಹಾಗೆ ಒಳ್ಳೆಯದನ್ನು ಮಾಡಲು ನಾವು ತೀರ ಚಿಕ್ಕವರೆಂದೋ ಅಥವಾ ವಯಸ್ಸು ಮೀರಿದೆಯೆಂದೋ ಹೇಳುವ ಮತ್ತೊಂದು ಜೋರು ದನಿ ಕೂಡ ನಮ್ಮೊಳಗಿರಬಹುದು.

ಈ ಕಾಮಿಕ್‌ನಲ್ಲಿ  ತಮ್ಮೊಳಗಿನ ಸಣ್ಣ ದನಿಗೆ ಕಿವಿಗೊಟ್ಟು ಬಹಳ ದೊಡ್ಡದನ್ನು ಸಾಧಿಸಿದ ವ್ಯಕ್ತಿಗಳ ಬಗ್ಗೆ ನೀವು ಓದುತ್ತೀರಿ.

ಶಾಲೆಯೊಂದರಲ್ಲಿ ಬಿಸಿಯೂಟ ತಯಾರಿಸಿ, ನೀಡುವ ಚಂಪಾ ದೇವಿ ತನ್ನ ಹಳ್ಳಿಯ ಜನರಿಗೆ ಗೊಬ್ಬರ ತಯಾರಿಸುವ ಮೂಲಕ ಹೇಗೆ ಮಾಲಿನ್ಯವನ್ನು ಕಡಿಮೆ ಮಾಡಬಹುದೆಂಬುದನ್ನು ತೋರಿಸಿಕೊಟ್ಟಿದ್ದರ ಬಗ್ಗೆ.

ಬಹಳ ಒಳ್ಳೆಯ ಉದ್ಯೋಗದಲ್ಲಿದ್ದ ರಾಮ್‌ವೀರ್ ಸಿಂಗ್,  ಅದನ್ನು ತ್ಯಜಿಸಿ ಕೆರೆಗಳನ್ನು ಸ್ವಚ್ಚಗೊಳಿಸಿ, ಪುನಃಶ್ಚೇತನಗೊಳಿಸಿದ್ದರ ಬಗ್ಗೆ.

ಮಾನವ ಮತ್ತು ಪ್ರಾಣಿಗಳನ್ನು ಹೊತ್ತ ಆಂಬ್ಯುಲೆನ್ಸ್‌ಗಳು ಓಡಾಡಲು ರಸ್ತೆಗಳು ತೀರ ಕಿರಿದಾಗಿದ್ದರಿಂದ, ಅವುಗಳ ಓಡಾಟ ಸುಲಭವಾಗಲೆಂದು ಆಟೋ ಆಂಬ್ಯುಲೆನ್ಸ್‌ಗಳನ್ನು ಪ್ರಾರಂಭಿಸಿದ ಕೆಫೆ ಮಾಲೀಕರಾದ ರಾಧಿಕ ಶಾಸ್ತ್ರಿಯವರ ಬಗ್ಗೆ.

ಹೀಗೆ ಇನ್ನೂ ಅನೇಕ ವ್ಯಕ್ತಿಗಳ ಬಗ್ಗೆ ನೀವು ಓದುತ್ತೀರಿ. ಇವರಾರೂ ಸುಲಭದ ದಾರಿಯನ್ನು ಆಯ್ದುಕೊಳ್ಳಲಿಲ್ಲ. ಬದಲಿಗೆ ಯಾರೂ ನಡೆಯದ ಹಾದಿಯಲ್ಲಿ ನಡೆದು ತಮ್ಮ ಸುತ್ತಲಿನ ಜನ, ಪ್ರಾಣಿ ಮತ್ತು ಪರಿಸರಕ್ಕೆ ಒಳ್ಳೆಯದನ್ನು ಮಾಡಲು ಬಯಸಿದರು.

# ಪರಿವಿಡಿ


| | | |
|---|---|---|
| 1 | ಚಂಪಾ ದೇವಿ | 3 |
| 2 | ರಾಮ್‌ವೀರ್ ತನ್ವಾರ್ | 6 |
| 3 | ಓಂ ಪ್ರಕಾಶ್ ಸಿಂಗ್ | 9 |
| 4 | ರಾಧಿಕಾ ಶಾಸ್ತ್ರಿ | 11 |
| 5 | ಚಿಂತಲ ವೆಂಕಟ ರೆಡ್ಡಿ | 13 |
| 6 | ಸಂದೀಪ್ ಕುಮಾರ್ ಬದ್‌ಸ್ರಾ | 16 |
| 7 | ಸುರೇಶ್ ಮತ್ತು ಮೈಥಿಲಿ | 18 |
| 8 | ದೀಪಮಾಲಾ ಪಾಂಡೆ | 21 |
| 9 | ಶ್ರೀಮನ್ ನಾರಾಯಣನ್ | 24 |
| 10 | ಡಾ. ಕುರೆಲ್ಲ ವಿಠ್ಠಲಾಚಾರ್ಯ | 27 |
| 11 | ರಾಹುಲ್ ಮಹಾರಾಣಾ | 30 |

# ಚಂಪಾ ದೇವಿ




*ಶಾಲಾ ಮಕ್ಕಳಿಗಾಗಿ ಅಡುಗೆ ಮಾಡುವ ಸರ್ಕಾರಿ ಶಾಲೆಯ ಊಟದ ಕಾರ್ಯಕ್ರಮದ ಕಾರ್ಯಕರ್ತರು


ತರಕಾರಿ ಸಿಪ್ಪೆ, ಎಲೆ ಮತ್ತು ಉಳಿದ ಆಹಾರವನ್ನು ನೀವು ಬೇರೆಯದೇ ತೊಟ್ಟಿಯಲ್ಲಿ ಏಕೆ ಸಂಗ್ರಹಿಸಬಾರದು. ಹೀಗೆ ಮಾಡಿದಲ್ಲಿ ಅದು ನಿಮ್ಮ ತರಕಾರಿ ತೋಟಕ್ಕೆ ಬಳಸಬಹುದಾದ ಉತ್ತಮ ಗೊಬ್ಬರವಾಗಿ ಬದಲಾಗುತ್ತದೆ.
ನಿಜವಾಗಿಯೂ? ಈ ಹೊಗೆಯಿಂದ ನಮಗೆ ತೊಂದರೆಯಾಗುತ್ತಿದೆ. ಗೊಬ್ಬರ ಹೇಗೆ ಮಾಡುವುದೆಂದು ನಮಗೆ ಹೇಳಿಕೊಡುವಿರಾ?
ಖಂಡಿತ.
ಚಂಪಾ ದೇವಿಯಿಂದ ತಿಳಿದುಕೊಳ್ಳಲು ಬಯಸಿದ್ದ ಇತರ ಮಹಿಳೆಯರೂ ಇದ್ದರು. ಸ್ವಲ್ಪ ಸಮಯದಲ್ಲೇ-
ನಾವು ಈ ಗುಂಡಿಗೆ ಅಡುಗೆ ಪದಾರ್ಥಗಳ ತ್ಯಾಜ್ಯ, ಒಣ ಎಲೆ ಮತ್ತು ಹುಲ್ಲನ್ನು ಹಾಕಿ ಪದರವನ್ನು ಮಾಡೋಣ. ಒದ್ದೆ ತ್ಯಾಜ್ಯದ ಒಂದು ಪದರ ಮತ್ತು ಒಣ ತ್ಯಾಜ್ಯದ ಒಂದು ಪದರ.
ಚಂಪಾ ದೇವಿಯವರು ಗ್ರಾಮದ ಮಹಿಳೆಯರಿಗೆ ಗೊಬ್ಬರ ಮಾಡುವ ಬಗ್ಗೆ, ಹಾಗೂ ತ್ಯಾಜ್ಯ ಸುಡುವುದನ್ನು ತಪ್ಪಿಸುವುದು ಹೇಗೆಂದು ಹೇಳಿಕೊಟ್ಟರು.
ಒಂದೆರಡು ದಿನಗಳಲ್ಲೇ ಅವರಿಗೆ ತ್ಯಾಜ್ಯ ಬೇರ್ಪಡಿಸಲು ಕೆಂಪು ಮತ್ತು ಹಸಿರು ಡಸ್ಟ್‌ಬಿನ್‌ಗಳನ್ನು ಸಿಕ್ಕಿದವು.
ಅಡುಗೆಮನೆಯ ತ್ಯಾಜ್ಯವನ್ನು ಹಸಿರು ಬಿನ್‌ಗೆ ಮತ್ತು ಒಣ ತ್ಯಾಜ್ಯವನ್ನು ಕೆಂಪು ಬಿನ್‌ಗೆ ಹಾಕಿ.
ತ್ಯಾಜ್ಯವನ್ನು ಬೇರ್ಪಡಿಸಲು ಮಕ್ಕಳು ತುಂಬಾ ಉತ್ಸುಕರಾಗಿದ್ದಾರೆ!


ತುಂಬಾ ಹಿಂದೆಯೇ ಮಹಿಳೆಯರು ಬಣ್ಣ ಬಣ್ಣದ ಬಿನ್‌ಗಳನ್ನು ಗ್ರಾಮದ ಪ್ರತಿ ಮನೆಗೂ ಹಂಚಿದ್ದರು. ಆದರೆ ಈಗ ಬೇರೆ ಬೇರೆ ರೀತಿಯ ತ್ಯಾಜ್ಯಗಳಿಗೆ ಬೇರೆ ಬೇರೆ ಬಣ್ಣದ ಬಿನ್‌ಗಳು ಇದ್ದವು.
ಕಾಗದ, ಗಾಜು ಮತ್ತು ಲೋಹದ ತ್ಯಾಜ್ಯಕ್ಕಾಗಿ ನೀಲಿ ಬಿನ್ ಬಳಸಿ. ಇವುಗಳನ್ನು ಮರುಬಳಕೆ ಅಥವಾ ಪುನರ್ಬಳಕೆ (ರೀಸೈಕಲ್) ಮಾಡಬಹುದು.
ಪುನರ್ಬಳಕೆಗಾಗಿ ಹಳದಿ ಬಿನ್‌ನಲ್ಲಿ ಬಾಟಲಿ ಮತ್ತು ಚೀಲಗಳಂತಹ ಪ್ಲಾಸ್ಟಿಕ್ ವಸ್ತುಗಳನ್ನು ಹಾಕಿ.
ಕೆಲವು ವಾರಗಳ ನಂತರ -
ಮರಗಳನ್ನು ನೆಡಲು ನಾವೆಲ್ಲಾ ಒಟ್ಟಿಗೆ ಸೇರುತ್ತಿರುವುದು ಖುಷಿಯ ಸಂಗತಿ.
ಮರಗಳು ಹೆಚ್ಚಿದ್ದರೆ ಶುದ್ಧ ಗಾಳಿ ದೊರೆಯುತ್ತದೆ!
ಚಂಪಾ ದೇವಿಯವರ ಕೆಲಸದ ಸುದ್ದಿ ಅಕ್ಕಪಕ್ಕದ ಹಳ್ಳಿಗಳಿಗೂ ಹಬ್ಬಿತು.
ನೀವು ನಿಮ್ಮ ಹಳ್ಳಿಯ ನೋಟವನ್ನೇ ಬದಲಿಸಿದ್ದೀರಿ ಚಂಪಾ ದೇವಿ! ಅದು ಹೇಗೆಂದು ನಮಗೂ ಹೇಳಿಕೊಡಿ.
ಖಂಡಿತಾ! ನಮ್ಮ ಎಲ್ಲಾ ಹಳ್ಳಿಗಳು ನಮ್ಮ ಮಕ್ಕಳು ಮತ್ತು ನಮಗಾಗಿ ಸ್ವಚ್ಛ ಮತ್ತು ಆರೋಗ್ಯಕರವಾಗಿರಬೇಕು.
ಮೂರು ವರ್ಷಗಳ ನಂತರ, ಪ್ರಧಾನಿ ಮೋದಿಯವರು ತಮ್ಮ ರೇಡಿಯೋ ಕಾರ್ಯಕ್ರಮವಾದ ಮನ್ ಕೀ ಬಾತ್‌ನಲ್ಲಿ ಚಂಪಾ ದೇವಿಯವರ ಪ್ರಯತ್ನವನ್ನು ಗುರುತಿಸಿದರು, ಇದು ಇಡೀ ಹಳ್ಳಿಯೇ ಸಂತೋಷಪಡಲು ಕಾರಣವಾಯಿತು.
ಚಂಪಾ ದೇವಿಯವರು ನೂರಾರು ಗಿಡಗಳನ್ನು ನೆಟ್ಟು, ತಮ್ಮ ಶ್ರಮದ ಮೂಲಕ ಹಸಿರಿನಿಂದ ಕೂಡಿದ ಗ್ರಾಮವನ್ನು ನಿರ್ಮಿಸಿದ್ದಾರೆ.
ಹಸಿರು ಮತ್ತು ಸ್ವಚ್ಛ ಪರಿಸರವನ್ನು ನಿರ್ಮಿಸುವಲ್ಲಿ ಹೆಚ್ಚಿನ ಜನರು ತಮ್ಮೊಂದಿಗೆ ಕೈಜೋಡಿಸುತ್ತಾರೆ ಎಂದು ಚಂಪಾ ದೇವಿ ಆಶಿಸುತ್ತಾರೆ.

# ರಾಮ್‌ವೀರ್ ತನ್ವಾರ್



ನಾಯರ್ ಸರ್ ತಮ್ಮ ವಿದ್ಯಾರ್ಥಿಗಳಿಗೆ ವಲಸೆ ಹಕ್ಕಿಗಳನ್ನು ತೋರಿಸಲು ಹತ್ತಿರದ ಸರೋವರಕ್ಕೆ ಕರೆದುಕೊಂಡು ಹೋಗಿದ್ದರು, ಆದರೆ -
ಅರೆರೆ! ಕೆರೆಯ ಅವಸ್ಥೆ ನೋಡಿ!
ಅಲ್ಲಿ ಸ್ವಲ್ಪವೇ ನೀರಿದೆ ಸಾರ್.
ಅಲ್ಲದೇ ಈ ಸ್ಥಳದಲ್ಲಿ ಕಸ ಕೊಳೆತು ದುರ್ವಾಸನೆ ಬೀರುತ್ತಿದೆ.
ಬನ್ನಿ, ಇದರ ಬದಲಿಗೆ ಉದ್ಯಾನವನಕ್ಕೆ ಹೋಗೋಣ. ನಾನು ನಿಮಗೊಂದು ಒಂದು ಕಥೆ ಹೇಳಲಿದ್ದು, ಅದು ನಿಮಗೆ ಸ್ಫೂರ್ತಿ ನೀಡಬಹುದೆಂದು ನಾನು ಭಾವಿಸುತ್ತೇನೆ.
ಇನ್ನೊಂದು ಕೊಳಕು ಕೆರೆಯ ಕಥೆಯಾ ಸಾರ್?
ಈ ಕಥೆಯು ಕೊಳಕು ಮತ್ತು ಜೀವಕಳೆದುಕೊಂಡಿದ್ದ ಸುಮಾರು 80 ಕೆರೆಗಳದಾಗಿದ್ದು, ಈಗ ಅವು ಪುನಃ ಜೀವತಳೆದುಕೊಂಡಿವೆ.
ರಾಮ್‌ವೀರ್ ತನ್ವಾರ್ ಸದಾ ಶಾಲೆ ಮುಗಿಸಿ ಊಟ ಮುಗಿಸುವ ಧಾವಂತದಲ್ಲಿ ಇರುತ್ತಿದ್ದ.
ರಾಮ್‌ವೀರ್, ನಿಧಾನವಾಗಿ ತಿನ್ನು, ಇಲ್ಲದಿದ್ದರೆ ಆಹಾರ ಗಂಟಲಿಗೆ ಸಿಕ್ಕಿಹಾಕಿಕೊಳ್ಳುತ್ತದೆ!
ಆಯ್ತು, ಅಮ್ಮಾ.


ತನ್ನ ಚೆಡ್ಡಿಗೆ ಬೆಂಕಿ ಹೊತ್ತಿಕೊಂಡಂತೆ ಹುಡುಗನೊಬ್ಬ ಓಡುತ್ತಿದ್ದಾನೆ.
ಅವನನ್ನು ಓಡಿಸುವಂತೆ ಮಾಡಿರುವುದು ಬೆಂಕಿಯಲ್ಲ, ನೀರು.
ಅದು ನಿಜವಾಗಿತ್ತು. ರಾಮ್‌ವೀರ್ ಪ್ರತಿನಿತ್ಯ ದನಗಳ ಹಿಂಡನ್ನು ತನ್ನ ಮನೆಯ ಸಮೀಪವಿರುವ ಕೆರೆಗೆ ಮೇಯಿಸಲು ಹೊಡೆದುಕೊಂಡು ಹೋಗುತ್ತಿದ್ದ.
ಇದು ದಿನದಲ್ಲಿ ಅತ್ಯುತ್ತಮ ಸಮಯವಾಗಿತ್ತು. ಹಸುಗಳಿಗೆ ಉತ್ತಮವಾದ ಹುಲ್ಲು ಸಿಗುತ್ತಿತ್ತು ಮತ್ತು ನನಗೆ ಉತ್ತಮ ನೋಟ ಕಾಣುತ್ತಿತ್ತು.
ರಾಮ್‌ವೀರ್ ನೀರಿನ ಮೇಲೆ ಬೀಸುವ ಗಾಳಿಯನ್ನು ವೀಕ್ಷಿಸುತ್ತಾ ಗಂಟೆಗಟ್ಟಲೆ ಕಾಲ ಕಳೆಯುತ್ತಿದ್ದ.
ವರ್ಷಗಳು ಉರುಳಿದವು ಮತ್ತು ರಾಮ್‌ವೀರ್ ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದಲು ನಗರಕ್ಕೆ ತೆರಳಿದನು. ಆದರೆ ಪ್ರತಿ ಬಾರಿ ಅವನು ಮನೆಗೆ ಭೇಟಿ ನೀಡಿದಾಗ-
ಒಂದರ ಹಿಂದೆ ಒಂದರಂತೆ ಕೆರೆಗಳನ್ನು ಭರ್ತಿಮಾಡಿ ಮನೆ ನಿರ್ಮಾಣ ಮಾಡಿಕೊಳ್ಳುತ್ತಿದ್ದರು. ಅಲ್ಲಿ ಯಾವುದೇ ಮರಗಳು ಉಳಿದಿಲ್ಲ.
ಹೌದು ಮಗನೆ. ನಮ್ಮ ಗ್ರಾಮ ಅಭಿವೃದ್ಧಿಯಾಗುತ್ತಿದೆ ಎನ್ನುತ್ತಾರೆ.
ಅವನು ಇದರ ಬಗ್ಗೆ ತನ್ನ ಸ್ನೇಹಿತರು ಮತ್ತು ಸಹಪಾಠಿಗಳೊಂದಿಗೆ ಮಾತನಾಡಿದನು.
ಈ ಬೆಳವಣಿಗೆಯಿಂದ ದಾದಾ ಗ್ರಾಮವು ಬದಲಾಗಿದೆ. ಗ್ರೇಟರ್ ನೋಯ್ಡಾ ಒಂದು ಜನನಿಬಿಡ ನಗರ ಪ್ರದೇಶವಾಗುತ್ತಿದೆ.
ನಾವು ಒಟ್ಟಾಗಬೇಕು ಮತ್ತು ಅದರ ಬಗ್ಗೆ ಏನಾದರೂ ಮಾಡಬೇಕು.
ಅವರ ಅದೃಷ್ಟಕ್ಕೆ, ಅವರ ಕಾಲೇಜು ಪರಿಸರಕ್ಕಾಗಿ ಕೆಲಸ ಮಾಡುವ ಕಾರ್ಯಕ್ರಮಗಳಿಗೆ ಸೇರಿಕೊಳ್ಳಲು ಅವಕಾಶ ನೀಡಿತು.
ನಮಗಿದೊಂದು ಅವಕಾಶ. ನಾವು ಒಂದು ಗುಂಪನ್ನು ಮಾಡೋಣ ಮತ್ತು ನಮ್ಮ ಜಲಮೂಲಗಳನ್ನು ರಕ್ಷಿಸುವ ಅಗತ್ಯತೆಯ ಬಗ್ಗೆ ಜನರಿಗೆ ಶಿಕ್ಷಣ ನೀಡೋಣ.
ನನ್ನನ್ನು ಸಹ ಸೇರಿಸಿಕೊಳ್ಳಿ.
ನನ್ನನ್ನೂ ಕೂಡ!


ರಾಮ್‌ವೀರ್ 'ಜಲ್ ಚೌಪಾಲ್'* ಎಂಬ ಗುಂಪೊಂದನ್ನು ರಚಿಸಿದನು- ಮತ್ತು, ತನ್ನ ಸ್ನೇಹಿತರೊಂದಿಗೆ ಹಳ್ಳಿಗರೊಂದಿಗೆ ಅನೌಪಚಾರಿಕ ಮಾತುಕತೆಗಳನ್ನು ನಡೆಸಲು ಪ್ರಾರಂಭಿಸಿದರು.
ಅಪ್ಪಾಜಿ, ನಾವು ನಮ್ಮ ಕೆರೆಗಳನ್ನು ಸಂರಕ್ಷಿಸಬೇಕು, ಇಲ್ಲದಿದ್ದರೆ ಅವುಗಳನ್ನು ಬಿಲ್ಡರ್‌ಗಳು ತೆಗೆದುಕೊಳ್ಳುತ್ತಾರೆ.
ನೀನು ಹೇಳಿದ್ದು ಸರಿ ಮಗನೇ. ಏನು ಮಾಡಬೇಕೆಂದು ನಮಗೆ ಹೇಳು.
ರಾಮ್‌ವೀರ್‌ಗೆ ದೊಡ್ಡ ಕಂಪನಿಯೊಂದರಲ್ಲಿ ಕೆಲಸ ಸಿಕ್ಕರೂ ಎರಡೇ ವರ್ಷದಲ್ಲಿ ಅದನ್ನು ಬಿಟ್ಟನು.
ನನ್ನಗೊಂದು ದೊಡ್ಡ ಗುರಿ ಇದೆ. ಕೆರೆಗಳಿಗೆ ನಗರದ ಒಳಚರಂಡಿಯನ್ನು ಸಂಪರ್ಕಿಸುವ ವಿಧಾನದಲ್ಲಿ ಸಮಸ್ಯೆ ಇದೆ. ಎಲ್ಲಾ ಕೊಳಚೆ ಮತ್ತು ಕಸವನ್ನು ಕೆರೆಗಳಿಗೆ ಸೇರಿಸಲಾಗುತ್ತಿದೆ.
2018 ರಲ್ಲಿ ರಾಮ್‌ವೀರ್ 'ಸೇ ಅರ್ಥ್' ಎಂಬ ಎನ್‌ಜಿಒ ಸ್ಥಾಪಿಸಿದರು. ಇದು ಜಲಮೂಲಗಳನ್ನು ಉಳಿಸುವ ಮತ್ತು ನಗರ ಕಾಡುಗಳನ್ನು ಸೃಷ್ಟಿಸುವ ಕೆಲಸ ಮಾಡಲು ಆರಂಭಿಸಿತು.
ಕೆರೆಗಳಿಗೆ ಸೇರಿದ ಕಸವು ಪದರಗಳಾಗಿ ರೂಪುಗೊಂಡಿತ್ತು. ಈ ಪದರಗಳನ್ನು ಒಂದೊಂದಾಗಿ ತೆಗೆದುಹಾಕಿ, ನೀರಿನ ನೈಸರ್ಗಿಕ ಹರಿವನ್ನು ಪುನಃಸ್ಥಾಪಿಸಲಾಯಿತು ಮತ್ತು ಸುತ್ತಮುತ್ತ ಮರಗಳನ್ನು ನೆಡಲಾಯಿತು.
ಆರು ವರ್ಷಗಳಲ್ಲಿ ರಾಮ್‌ವೀರ್ ಅವರ ಎನ್‌ಜಿಒ 80 ಕೆರೆಗಳನ್ನು ಪುನಃಶ್ಚೇತನಗೊಳಿಸಿತು ಮತ್ತು ಆರು ರಾಜ್ಯಗಳಲ್ಲಿ ನಾಲ್ಕು ನಗರ ಅರಣ್ಯಗಳನ್ನು ಸೃಷ್ಟಿಸಿತು.
ಕೆರೆಗಳ ಸುತ್ತಲೂ ಜನರು ತಿರುಗಾಡುವುದನ್ನು ನೋಡಿದಾಗ, ಇಲ್ಲಿಗೆ ಬರುವ ನೀರು ಹಕ್ಕಿಗಳನ್ನು ನೋಡಿದಾಗ ನನಗೆ ಸಂತೋಷವಾಗುತ್ತದೆ.
ಜನರು ರಾಮ್‌ವೀರ್ ಅವರನ್ನು 'ಭಾರತದ ಪಾಂಡ್‌ಮ್ಯಾನ್' ಎಂದು ಕರೆಯುತ್ತಾರೆ. ಪ್ರಧಾನಿಯವರು ಅವರ ಪ್ರಯತ್ನವನ್ನು ಗುರುತಿಸಿದ್ದಾರೆ ಮತ್ತು ಅದಕ್ಕಾಗಿ ಅವರನ್ನು ಶ್ಲಾಘಿಸಿದ್ದಾರೆ.

*ನೀರಿಗಾಗಿ ಸಮುದಾಯ

# ಓಂ ಪ್ರಕಾಶ್ ಸಿಂಗ್




*ಗ್ರಾಮೀಣ ಮತ್ತು ದೂರದ ಸ್ಥಳಗಳಿಗೆ ಸರ್ಕಾರಿ ಸೇವೆಗಳನ್ನು ತಲುಪಿಸಲು ಭೌತಿಕ ಸೌಲಭ್ಯಗಳು




*ಹಿಂದಿಯಲ್ಲಿ ಚಿಕ್ಕಪ್ಪ

^ಗ್ರಾಮೀಣ ತಾಯಿ ಮತ್ತು ಶಿಶುಪಾಲನಾ ಕೇಂದ್ರ

# ರಾಧಿಕಾ ಶಾಸ್ತ್ರಿ


ಆಂಬ್ಯುಲೆನ್ಸ್ ಮೂಲಕ 10ನೇ ತರಗತಿಯ ಹುಡುಗನನ್ನು ಆಸ್ಪತ್ರೆಗೆ ಕರೆದೊಯ್ಯುವುದನ್ನು ನೋಡುತ್ತಾ ಎಲ್ಲಾ ಮಕ್ಕಳು ಶಾಲೆಯ ಮುಂದೆ ಒಟ್ಟಿಗೆ ಸೇರಿದ್ದರು.
ಪಾಪ, ರಾಲ್! ಕ್ರಿಕೆಟ್ ಆಡುವಾಗ ಅವನ ಕಾಲು ತಿರುಚಿಕೊಂಡಿತು.
ಕಾಲು ಮುರಿದಿರಬಹುದು ಎಂದು ಅವರು ಹೇಳುತ್ತಾರೆ. ಹೇಗಾದರೂ, ಆಂಬ್ಯುಲೆನ್ಸ್ ಅವರನ್ನು ತಕ್ಷಣ ಆಸ್ಪತ್ರೆಗೆ ತಲುಪಿಸುತ್ತದೆ.
ಹೌದು, ಅವನು ಐದು ನಿಮಿಷಗಳಲ್ಲಿ ಆಸ್ಪತ್ರೆ ತಲುಪುತ್ತಾನೆ. ಆದರೆ ಆಂಬ್ಯುಲೆನ್ಸಿಗೆ ರೋಗಿಯನ್ನು ಸಮಯಕ್ಕೆ ಸರಿಯಾಗಿ ತಲುಪಿಸಲಾಗದಿದ್ದರೆ ಹೇಗೆ? ಕೂನೂರಿನಲ್ಲಿ ರಾಧಿಕಾ ಶಾಸ್ತ್ರಿಯವರಿಗೆ ಆಗಿದ್ದು ಇದೇ.
ರಾಧಿಕಾ ಶಾಸ್ತ್ರಿ, ಬೆಂಗಳೂರಿನಲ್ಲಿ 30 ವರ್ಷಗಳ ಕಾಲ ಕೆಲಸ ಮಾಡಿದ್ದರು. ಈಗ ಅವರು ಕೂನೂರಿನಲ್ಲಿ ಕೆಫೆ ಒಂದನ್ನು ತೆರೆದಿದ್ದಾರೆ.
ಸಸ್ಯಾಹಾರಿ ಕೆಫೆಯಿಂದ ವ್ಯಾಪಾರ ಅಷ್ಟೇನೂ ಆಗದು ಎಂದು ಜನರು ಹೇಳುತ್ತಾರೆ. ಆದರೆ ವ್ಯಾಪಾರ ಆಗುತ್ತದೆಂದು ನಾನು ನಂಬುತ್ತೇನೆ.
ಕೆಫೆ ಡ್ರೈಮ್ ಬಹಳ ಪ್ರಖ್ಯಾತಿ ಪಡೆದುಕೊಂಡು ಒಳ್ಳೆಯ ವಹಿವಾಟು ನಡೆಯುತ್ತಿದ್ದಾಗ, ರಾಧಿಕಾರವರ ಮನಸ್ಸು ಇತರ ಸಮಸ್ಯೆಗಳತ್ತ ತಿರುಗಿತು.
ಕಿರಿದಾದ ದಾರಿಯಲ್ಲಿ ಆಂಬುಲೆನ್ಸ್ ಹೋಗುವಂತಿರಲಿಲ್ಲ. ಹೀಗಾಗಿ ಅಲ್ಲಿನ ಜನರು ರೋಗಿಯನ್ನು ಮೇಲಿನಿಂದ ಕೆಳಗೆ ಕರೆದುಕೊಂಡು ಬರಬೇಕಾಗುತ್ತಿತ್ತು!




*ನೀಲಗಿರಿಯಲ್ಲಿ ವಾಸಿಸುವ ಬುಡಕಟ್ಟು ಜನ

# ಚಿಂತಲ ವೆಂಕಟ ರೆಡ್ಡಿ



ವಿದ್ಯಾರ್ಥಿಗಳು ಬಿಡುವಿನ ಅವಧಿಯ ನಂತರ ತರಗತಿಗೆ ಮರಳಿದ್ದರಷ್ಟೆ.
ಸೋನಾಲ್, ನೀನು ಯಾಕೆ ಆಟವಾಡಲು ಬರಲಿಲ್ಲ?
ನಾನು ಓದುತ್ತಿದ್ದೆ.
ಸರ್, ಸೋನಾಲ್ ಬಿಸಿಲಿನಲ್ಲಿ ಆಟವಾಡಲು ಬರುವುದೇ ಇಲ್ಲ.
ವಿಟಮಿನ್ ಡಿ ಪಡೆಯುವ ಏಕೈಕ ಮಾರ್ಗವೆಂದರೆ, ಬಿಸಿಲಿನ ಮೂಲಕ ಎಂಬುದನ್ನು ನಾನು ಕೇಳಿದ್ದೇನೆ.
ಸುಜಿತ್, ವಿಟಮಿನ್ ಡಿ ಡೈರಿ ಉತ್ಪನ್ನಗಳಲ್ಲಿಯೂ ಇರುತ್ತದೆ. ಚಿಂತಲ ವೆಂಕಟ ರೆಡ್ಡಿ ಅವರು ವಿಟಮಿನ್ ಡಿ ಹೊಂದಿರುವ ಸಸ್ಯಗಳನ್ನು ಬೆಳೆಸುವ ವಿನೂತನ ಮಾರ್ಗವನ್ನು ಕಂಡುಕೊಂಡಿದ್ದಾರೆ.
2017 ರಲ್ಲಿ ತೆಲಂಗಾಣದ ಚಿಂತಲ ವೆಂಕಟ್ ರೆಡ್ಡಿ ಎಂಬ ಶ್ರೀಮಂತ ರೈತ ತನ್ನ ವೈದ್ಯ ಸ್ನೇಹಿತನೊಂದಿಗೆ ಮಾತನಾಡುತ್ತಿದ್ದರು.
ರೆಡ್ಡಿ, ನೀವು ಅದೃಷ್ಟವಂತರು. ನೀವು ರೈತರಾಗಿರುವುದರಿಂದ ಪ್ರತಿದಿನ ನೀವು ಸಾಕಷ್ಟು ಸಮಯ ಬಿಸಿಲಿನಲ್ಲಿ ಇರುತ್ತೀರಿ.
ಅದು ಹೇಗೆ?
ಇತ್ತೀಚಿನ ದಿನಗಳಲ್ಲಿ ನನ್ನ ಹೆಚ್ಚಿನ ಯುವ ರೋಗಿಗಳಿಗೆ ವಿಟಮಿನ್ ಡಿ ಕೊರತೆಯಿದೆ. ಪ್ರತಿಯೊಬ್ಬರೂ ಮನೆಯೊಳಗೆ ಕೆಲಸದಲ್ಲಿ ನಿರತರಾಗಿದ್ದಾರೆ, ಹೀಗಾಗಿ ಅವರು ಬಿಸಿಲಿಗೆ ಬರುವುದೇ ಇಲ್ಲ.
ಅದು ಒಳ್ಳೆಯದಲ್ಲ!
ಹೌದು, ವಿಟಮಿನ್ ಡಿ ಮೂಳೆ ಮತ್ತು ಸ್ನಾಯುವಿನ ಆರೋಗ್ಯವನ್ನು ನಿಯಂತ್ರಿಸುತ್ತದೆ ಮತ್ತು ಅದರ ಕೊರತೆಯು ಆಯಾಸ, ದುರ್ಬಲ ರೋಗನಿರೋಧಕ ಶಕ್ತಿ ಮತ್ತು ಖಿನ್ನತೆಗೆ ಕಾರಣವಾಗುತ್ತದೆ.
ಈ ಸಂಭಾಷಣೆಯು ರೆಡ್ಡಿಯವರ ಮನಸ್ಸಿನ ಮೇಲೆ ಆಳವಾದ ಪ್ರಭಾವವನ್ನು ಬೀರಿತು.
ವಿಟಮಿನ್ ಡಿ ಕೊರತೆಯಿಂದ ಯುವಕರು ಅನಾರೋಗ್ಯಕ್ಕೆ ಒಳಗಾಗುವುದು ಗಂಭೀರ ಸಮಸ್ಯೆಯಾಗಿದೆ. ಅದಕ್ಕೆ ಏನಾದರೂ ಮಾಡಲೇಬೇಕು.


ಒಂದು ದಿನ ರೆಡ್ಡಿಯವರು ತನ್ನ ಜಮೀನಿನಲ್ಲಿದ್ದಾಗ ಇದ್ದಕ್ಕಿದ್ದಂತೆ ಒಂದು ಉಪಾಯ ಹೊಳೆಯಿತು.
ಸಸ್ಯಗಳು ತಮ್ಮ ಆಹಾರಕ್ಕಾಗಿ ದ್ಯುತಿಸಂಶ್ಲೇಷಣೆ ಮಾಡಬಹುದಾದರೆ, ಅವು ಸೂರ್ಯನಿಂದ ವಿಟಮಿನ್ ಡಿ ಯನ್ನು ಏಕೆ ಉತ್ಪಾದಿಸುವುದಿಲ್ಲ?
ರೆಡ್ಡಿಯವರು ತನ್ನ ಜಮೀನಿನಲ್ಲಿ ಪ್ರಯೋಗ ಮಾಡಲು ಆರಂಭಿಸಿದರು.
ವಿಟಮಿನ್ ಎ ಮತ್ತು ಸಿ ಉತ್ಪಾದಿಸುವ ಸಸ್ಯಗಳಿವೆ; ವಿಟಮಿನ್ ಡಿ ಯನ್ನೂ ಉತ್ಪಾದಿಸಬಹುದೇ ಎಂದು ನೋಡೋಣ.
ರೆಡ್ಡಿಯವರು ತಮ್ಮ ಪ್ರಯೋಗಗಳಿಗಾಗಿ ಅಕ್ಕಿ ಮತ್ತು ಗೋಧಿಯ ಮೂರು ಮಾದರಿ ಸಸಿಮಡಿಗಳನ್ನು ರಚಿಸಿದರು.
ಒಂದರಲ್ಲಿ, ಅವರು ಮೊಟ್ಟೆ, ಹಾಲು, ತುಪ್ಪ ಮತ್ತು ಚೀಸ್ ನಂತಹ ಪ್ರಾಣಿ ಉತ್ಪನ್ನಗಳನ್ನು ಸೇರಿಸಿದರು.
ಸಸ್ಯಗಳು ಇವುಗಳಿಂದ ಪೋಷಕಾಂಶಗಳನ್ನು ಹೀರಿಕೊಳ್ಳುತ್ತವೆ ಎಂದು ನಾನು ಭಾವಿಸುತ್ತೇನೆ.
ಎರಡನೆಯದರಲ್ಲಿ, ಅವರು ವಿಟಮಿನ್ ಡಿ ಮಾತ್ರೆಗಳ ದ್ರಾವಣವನ್ನು ಸೇರಿಸಿದರು.
ಮೂರನೇಯ ಸಸಿಮಡಿಯಲ್ಲಿ, ಅವರು ಕ್ಯಾರೆಟ್, ಸಿಹಿಗೆಣಸು ಮತ್ತು ಜೋಳದ ಹಿಟ್ಟಿನ ಪೇಸ್ಟನ್ನು ಸೇರಿಸಿದರು.













*ಅಂತರರಾಷ್ಟ್ರೀಯ ಘಟಕಗಳು

^CVR (ಚಿಂತಲ ವೆಂಕಟ್ ರೆಡ್ಡಿ) ಮಣ್ಣಿನ ತಂತ್ರ ಎಂದು ಕರೆಯಲಾಗುತ್ತದೆ

**ಫಲವತ್ತತೆಯನ್ನು ಸುಧಾರಿಸಲು ಮಣ್ಣಿನ ಮೇಲಿನ ಪದರವನ್ನು ಬದಲಾಯಿಸುವ ತಂತ್ರ

# ಸಂದೀಪ್ ಕುಮಾರ್ ಬದ್‌ಸ್ರಾ




*ಹಳೇ ಪುಸ್ತಕ ಮತ್ತು ದಿನಪತ್ರಿಕೆಗಳನ್ನು ಕೊಂಡು ಸಂಗ್ರಹಿಸುವವರು




*ಅಣ್ಣನ ಪತ್ನಿ

^ಹಿಂದಿಯಲ್ಲಿ ಚಿಕ್ಕಪ್ಪ

# ಸುರೇಶ್ ಮತ್ತು ಮೈಥಿಲಿ




*ಸಿರಪ್‌ನೊಂದಿಗೆ ಪುಡಿಮಾಡಿದ ಐಸ್




*ಉತ್ಪನ್ನಕ್ಕಾಗಿ ಬಳಸಲಾದ ಪದ

^ಕೃಷಿ ಅಭಿವೃದ್ಧಿಗಾಗಿ ಇರುವ ಸರ್ಕಾರದ ಒಂದು ಯೋಜನೆ


ಸುರೇಶ್ ಮತ್ತು ಮೈಥಿಲಿ, ಭೂಮಿ ಅಗ್ರೋ ವೆಂಚರ್ಸ್ ಎಂಬ ಸಣ್ಣ ಉದ್ಯಮವನ್ನು ಪ್ರಾರಂಭಿಸಿದರು.
ಸ್ವಲ್ಪವೇ ತಿಂಗಳುಗಳಲ್ಲಿ, ಕೆಲವು ಕೆಲಸಗಾರರು ಬಂದರು. ಅವರು ಹೆಚ್ಚುವರಿ ಉತ್ಪನ್ನಗಳನ್ನು ತಯಾರಿಸಲು ಪ್ರಾರಂಭಿಸಿದರು.
ವಿಶಿಷ್ಟ ಉತ್ಪನ್ನಗಳಿಗೆ ಶೀಘ್ರದಲ್ಲೇ ಹೆಚ್ಚಿನ ಬೇಡಿಕೆ ಬಂದಿತು.
ಈ ಪ್ಲೇಟುಗಳನ್ನು ಮೈಕ್ರೊವೇವ್ ಓವನ್‌ನಲ್ಲಿಯೂ ಬಳಸಬಹುದು.
ಅದ್ಭುತ!
ಈ ಚಪ್ಪಲಿಗಳು ಸಂಪೂರ್ಣವಾಗಿ ಜೈವಿಕ ವಿಘಟನೀಯವಾಗಿವೆ ಎಂದು ನಾನು ನಂಬಲು ಸಾಧ್ಯವಿಲ್ಲ. ಪ್ಲಾಸ್ಟಿಕ್ ಮತ್ತು ಚರ್ಮಕ್ಕೆ ಇದು ಅದ್ಭುತ ಪರ್ಯಾಯವಾಗಿದೆ!
ಇಂದು, ಸುರೇಶ್ ಮತ್ತು ಮೈಥಿಲಿ ಅವರ ಸಾಹಸವು ಅತ್ಯಂತ ಯಶಸ್ಸನ್ನು ಕಂಡಿದ್ದು, ಉತ್ಪನ್ನಗಳನ್ನು ಅಂತಾರಾಷ್ಟ್ರೀಯವಾಗಿ ರಫ್ತು ಮಾಡಲಾಗುತ್ತಿದೆ.
This is an artist's interpretation of the map and does not claim to be accurate.
ಪ್ರಧಾನಿಯವರು ತಮ್ಮ ರೇಡಿಯೋ ಕಾರ್ಯಕ್ರಮದಲ್ಲಿ ಈ ದಂಪತಿಗಳನ್ನು ಶ್ಲಾಘಿಸಿದರು, ಮತ್ತು ನಾಗರಿಕರನ್ನು ಸ್ಥಳೀಯ, ಸುಸ್ಥಿರ ಉತ್ಪನ್ನಗಳನ್ನು ಖರೀದಿಸುವಂತೆ ಪ್ರೋತ್ಸಾಹಿಸಿದರು.

# ದೀಪಮಾಲಾ ಪಾಂಡೆ




*ಉತ್ತರ ಪ್ರದೇಶದ ನಗರ


ಈ ವಿದ್ಯಾರ್ಥಿ ಯಾವಾಗಲೂ ನಿಮ್ಮೊಂದಿಗೆ ಏಕೆ ಇರುತ್ತಾನೆ? ಅವನು ತರಗತಿಯಲ್ಲಿ ಇರಬೇಕಲ್ಲವೇ?
ಅವನು ಇನ್ನೂ ಶಾಲೆಯ ವಾತಾವರಣಕ್ಕೆ ಒಗ್ಗಿಕೊಳ್ಳುತ್ತಿದ್ದಾನೆ. ನಾವು ತಾಳ್ಮೆಯಿಂದಿರಬೇಕು.
ದೀಪಮಾಲಾ, ಅನ್ಮೋಲ್ ನೊಂದಿಗೆ ಸಂಕೇತ ಭಾಷೆಯಲ್ಲಿ ಸಂವಹನ ನಡೆಸಲು ಪ್ರಾರಂಭಿಸಿದರು.
ಶುಭೋದಯ.
...ಮತ್ತು ಅನ್ಮೋಲ್ ಹಿಂದಿರುಗಿನ ಸಂವಹನ ಮಾಡಲು ಆರಂಭಿಸಿದನು.
ಕ್ರಮೇಣವಾಗಿ, ಅವನು ತರಗತಿಯಲ್ಲಿ ಕುಳಿತು, ಇತರ ವಿದ್ಯಾರ್ಥಿಗಳೊಂದಿಗೆ ಕಲಿಯುತ್ತಿದ್ದನು.
ಅನ್ಮೋಲ್‌ಗೆ ಸರ್ಕಾರಿ ವಿದ್ಯಾರ್ಥಿವೇತನ ಸಿಕ್ಕ ದಿನ ಹೆಮ್ಮೆಯ ಕ್ಷಣವಾಗಿತ್ತು.
ಸಾಮಾನ್ಯವಾಗಿ ಅಂಗವಿಕಲ ಮಕ್ಕಳ ಪೋಷಕರು, ಮಕ್ಕಳ ಪರವಾಗಿ ಸಹಿ ಮಾಡುತ್ತಾರೆ ಆದರೆ ಅನ್ಮೋಲ್ ಸ್ವತಃ ಸಹಿ ಮಾಡುತ್ತಾನೆ!
ನನ್ನ ಮಗ ತುಂಬಾ ಆತ್ಮವಿಶ್ವಾಸಿ ಮತ್ತು ಸ್ವಾವಲಂಬಿಯಾಗಿದ್ದಾನೆ.




*RIGHT OF PERSONS WITH DISABILITIES ಕಾಯಿದೆ

# ಶ್ರೀಮನ್ ನಾರಾಯಣನ್




*ಕೇರಳದ ಒಂದು ಜಿಲ್ಲೆ

^ಮಲಯಾಳಂ ಭಾಷೆಯಲ್ಲಿ ಅಣ್ಣ




*ಜೀವ ಉಳಿಸುವ ನೀರಿಗಾಗಿ ಮಣ್ಣಿನ ಮಡಕೆ.



ಅವರು ನೂರಾರು ಸಸಿಗಳನ್ನು ಖರೀದಿಸಲು ಪ್ರಾರಂಭಿಸಿದರು ಮತ್ತು -
ಸರೋಜಿನಿ ಅಮ್ಮಾ, ಒಂದಿಷ್ಟು ಗಿಡಗಳನ್ನು ತೆಗೆದುಕೊಂಡು ಹೋಗಿ ನಿಮ್ಮ ಮನೆಯ ಸುತ್ತ ನೆಡಿ.
ನಾನು ಕೂಡ ಕೆಲವನ್ನು ತೆಗೆದುಕೊಳ್ಳಬಹುದೇ? ನನಗೆ ಸಪೋಟಾ ಸಸಿ ಕಾಣಿಸುತ್ತಿದೆ.
ಹೀಗೆ ನಂತರ, ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ತೆರಳಿ ಸಸಿಗಳನ್ನು ವಿತರಿಸಿದರು.
ನಾರಾಯಣನ್, ನೀವು ನಿಜವಾಗಿಯೂ ಪರಿಸರ ಹೋರಾಟಗಾರರು. ಆದರೆ ಈ ಎಲ್ಲಾ ಸಸಿಗಳಿಗೆ ನೀವು ಹಣವನ್ನು ಹೇಗೆ ಪಾವತಿಸುತ್ತಿದ್ದೀರಿ?
ನನ್ನ ಮೂವರು ಮಕ್ಕಳು ಅವರವರ ಜೀವನ ನೋಡಿಕೊಂಡು ಸಂತೋಷವಾಗಿದ್ದಾರೆ. ಹೀಗಾಗಿ ಈಗ ನಾನು ನನ್ನ ಎಲ್ಲಾ ಗಳಿಕೆಯ ಹಣವನ್ನು ಈ ಉದ್ದೇಶಕ್ಕಾಗಿ ಅರ್ಪಿಸುತ್ತಿದ್ದೇನೆ.
ನಾರಾಯಣನ್ ಅವರು 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ತಮ್ಮ ಇಡೀ ಜಿಲ್ಲೆಯಲ್ಲಿ 50,000 ಗಿಡಗಳನ್ನು ವಿತರಿಸಿದರು
ಮುಂದಿನ ಬೇಸಿಗೆಯಲ್ಲಿ -
ಮಣ್ಣಿನ ಮಡಿಕೆ ಅಭಿಯಾನವನ್ನು ಪುನಃ ಪ್ರಾರಂಭಿಸುತ್ತಿರುವಿರೇ?
ಹೌದು, ನಾನು ಈಗಾಗಲೇ 10,000 ಮಣ್ಣಿನ ಮಡಕೆಗಳಿಗಾಗಿ ಆರ್ಡರ್ ಮಾಡಿದ್ದೇನೆ. ಅವುಗಳನ್ನು ವಿತರಿಸಲು ನೀನು ನನಗೆ ಸಹಾಯ ಮಾಡುವೆಯಾ?
ಖಂಡಿತ! ನಾವು ಅವುಗಳನ್ನು ವಸತಿ ಸಮುದಾಯಗಳು ಮತ್ತು ಶಾಲೆಗಳು ಮತ್ತು ಕಾಲೇಜುಗಳಲ್ಲಿ ವಿತರಿಸೋಣ.
ಮಡಕೆಗಳು ಮುಗಿದ ನಂತರ, ನಾರಾಯಣನ್ ಮತ್ತಷ್ಟು ಬೇಕೆಂದು ಆರ್ಡರ್ ಮಾಡಿದರು.
ಮುಂದಿನ ಮೂರು ವರ್ಷಗಳಲ್ಲಿ, ನಾರಾಯಣನ್ ಸುಮಾರು ಒಂದು ಲಕ್ಷ ಮಣ್ಣಿನ ಮಡಕೆಗಳನ್ನು ಉಚಿತವಾಗಿ ವಿತರಿಸಿದರು.
ಪ್ರಸ್ತುತ ಪರಿಸರ ನಾಶವನ್ನು ನಿರ್ಲಕ್ಷಿಸಿ ನನ್ನ ಭವಿಷ್ಯಕ್ಕಾಗಿ ಹಣ ಉಳಿಸಲು ನಾನು ಬಯಸುವುದಿಲ್ಲ.
ಮಹಾತ್ಮ ಗಾಂಧಿಯವರ ವಿಚಾರಧಾರೆಗಳ ಅನುಯಾಯಿಯಾಗಿದ್ದ ನಾರಾಯಣನ್ ಅವರು, ತಮ್ಮ ಈ ಮಹತ್ಕಾರ್ಯಕ್ಕಾಗಿ ಇತ್ತೀಚೆಗೆ ಎಸ್.ಕೆ. ಪೊಟ್ಟೆಕ್ಕಾಟ್ ಪ್ರಶಸ್ತಿ ಮತ್ತು ವೃಕ್ಷ ಮಿತ್ರ ಪ್ರಶಸ್ತಿಗೆ ಭಾಜನರಾದರು.

# ಡಾ. ಕುರೆಲ್ಲ ವಿಠ್ಠಲಾಚಾರ್ಯ




*ತೆಲಂಗಾಣದಲ್ಲಿ

^ಭೂಮಾಲೀಕರು


...ರಾತ್ರಿಯಿಡೀ ಅವುಗಳನ್ನು ಓದುತ್ತಿದ್ದರು...
...ಮತ್ತು ಬೆಳಿಗ್ಗೆಯೊಳಗೆ ಅವುಗಳನ್ನು ಮುಗಿಸುತ್ತಿದ್ದರು.
ನಿಮ್ಮ ಪುಸ್ತಕ.
ನೀನು ಆಗಲೇ ಓದಿ ಮುಗಿಸಿದೆಯೇ!?
ಶಾಲೆಗೆ ಹೋಗುವಾಗಲೂ.
ಕೆಲವೇ ವರ್ಷಗಳಲ್ಲೇ ಅವರು ಕಾಲೇಜು ಮುಗಿಸಿದರು ಮತ್ತು ತೆಲುಗು ಬೋಧಿಸಲು ಪ್ರಾರಂಭಿಸಿದರು. ನಂತರ ಪಿಎಚ್.ಡಿ ಮಾಡಿ ಸರ್ಕಾರಿ ಕಾಲೇಜಿನ ಪ್ರಾಂಶುಪಾಲರಾದರು. ಈಗ ಅವರು ಅನೇಕ ಪುಸ್ತಕಗಳನ್ನು ಖರೀದಿಸಲು ಸಾಧ್ಯವಾಯಿತು.
ಕುರೆಲ್ಲಾ ಅವರು ತೆಲುಗಿನಲ್ಲಿ 22 ಪುಸ್ತಕಗಳನ್ನು ಸಹ ಬರೆದಿದ್ದಾರೆ.
1993 ರಲ್ಲಿ ಅವರು ನಿವೃತ್ತರಾಗಿ ತಮ್ಮ ಗ್ರಾಮಕ್ಕೆ ಮರಳಿ ಬಂದರು.
ಈಗ ನಾನು ಬಯಸಿದ ಗ್ರಂಥಾಲಯವನ್ನು ಮಾಡಬಹುದು. ನನ್ನ ಬಳಿ ಎಂದಿಗೂ ಇರದ ಸಂಪನ್ಮೂಲಗಳನ್ನು ಈ ಮಕ್ಕಳು ಹೊಂದಿರುತ್ತಾರೆ.
ಈ ಕೆಲಸ ಮಾಡಲು ಕೆಲವು ವರ್ಷಗಳು ಬೇಕಾದವು, ಆದರೆ 2014 ರಲ್ಲಿ -
ಪ್ರಾಂಶುಪಾಲರೇ, ಏನು ಮಾಡುತ್ತಿದ್ದೀರಿ?
ನನ್ನ ಉಳಿತಾಯದ ಹಣದಿಂದ ನನ್ನ ಮನೆಯಲ್ಲಿ ಬೃಹತ್ತಾದ ಸಭಾಂಗಣವನ್ನು ನಿರ್ಮಿಸುತ್ತಿದ್ದೇನೆ.


ಕೆಲವೇ ತಿಂಗಳುಗಳಲ್ಲೇ-
ನನ್ನ ಮನೆಯ ಒಂದು ಭಾಗವು ಈಗ ಕಲಿಯಲು ಬಯಸುವವರಿಗೆ ಮೀಸಲಾದ ಗ್ರಂಥಾಲಯವಾಗಿದೆ. ನನ್ನ ಎಲ್ಲಾ 5,000 ಪುಸ್ತಕಗಳು ಇಲ್ಲಿ ಉಚಿತವಾಗಿ ಲಭ್ಯವಿವೆ. ಬೇರೆ ಯಾರಾದರೂ ತಮ್ಮ ಪುಸ್ತಕಗಳನ್ನು ದಾನ ಮಾಡಲು ಬಯಸಿದರೆ, ಅವರಿಗೆ ನಾನು ಕೃತಜ್ಞನಾಗಿರುತ್ತೇನೆ.
WELCOME
ಲೇಖಕರು, ಕವಿಗಳು ಮತ್ತು ವಿದ್ಯಾರ್ಥಿಗಳು ಇವರ ಮನವಿಗೆ ಪ್ರತಿಕ್ರಿಯಿಸಿದರು. ಸ್ವಲ್ಪವೇ ಅವಧಿಯಲ್ಲಿ 5,000 ಪುಸ್ತಕಗಳ ಸಂಖ್ಯೆ 2,00,000 ಕ್ಕೆ ಏರಿತು! ಇವುಗಳಲ್ಲಿ ಕೆಲವು ಅಪರೂಪದ ಪುಸ್ತಕಗಳೂ ಸೇರಿದ್ದವು.
ನಮಗೆ ಹೆಚ್ಚಿನ ಸ್ಥಳ ಬೇಕು! ನಾನು ದೊಡ್ಡ ಗ್ರಂಥಾಲಯವನ್ನು ಮಾಡಬೇಕು.
ಕುರೆಲ್ಲಾ, ಮೊದಲ ಮಹಡಿಯನ್ನು ಸಹ ಗ್ರಂಥಾಲಯವಾಗಿ ಪರಿವರ್ತಿಸಿದರು. 'ಆಚಾರ್ಯ ಕುರೆಲ್ಲ ಗ್ರಂಥಾಲಯ'ವು ಈಗ ಜ್ಞಾನ ಭಂಡಾರವಾಗಿ ಮಾರ್ಪಟ್ಟಿತು.
ನನ್ನ ಗ್ರಂಥಾಲದಲ್ಲಿರುವ ಮಾಹಿತಿಯ ಆಧಾರದ ಮೇಲೆ ಇದುವರೆಗೆ ಎಂಟು ಸಂಶೋಧನಾರ್ಥಿಗಳು ತಮ್ಮ ಪಿಎಚ್‌ಡಿ ಪಡೆದಿದ್ದಾರೆ.
ತೆಲುಗು ಭಾಷೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ, ಡಾ. ಕುರೆಲ್ಲ ವಿಠ್ಠಲಾಚಾರ್ಯ ಅವರಿಗೆ 2019 ರಲ್ಲಿ ದಶರಥಿ ಪ್ರಶಸ್ತಿಯನ್ನು ನೀಡಲಾಯಿತು. ಮನ್ ಕೀ ಬಾತ್‌ನಲ್ಲಿ ಪ್ರಧಾನಿ ಮೋದಿ, ಇವರ ಬಗ್ಗೆಯೂ ಪ್ರಸ್ತಾಪ ಮಾಡಿದರು.
ಗ್ರಾಮೀಣ ಗ್ರಂಥಾಲಯಗಳನ್ನು ಸ್ಥಾಪಿಸಲು, ನನ್ನ ಗ್ರಂಥಾಲಯವು ಇತರರಿಗೆ ಪ್ರೇರಣೆಯಾಗಿದೆ ಎಂಬುದು ನನಗೆ ಹೆಚ್ಚು ಸಂತೋಷವನ್ನು ನೀಡುತ್ತದೆ. ಇದರರ್ಥ, ಸಣ್ಣ ಹಳ್ಳಿಗಳ ಮಕ್ಕಳು ಸಂಪನ್ಮೂಲಗಳ ಕೊರತೆಯಿಂದ ತೊಂದರೆಗೊಳಗಾಗುವುದಿಲ್ಲ.

# ರಾಹುಲ್ ಮಹಾರಾಣಾ













*ಒಡಿಶಾದಲ್ಲಿ


ಈ ಬಾಟಲ್ ಮಣ್ಣಿನ ಪದರಗಳಿಂದ ಮುಚ್ಚಿ ಹೋಗಿದೆ! ಈ ತ್ಯಾಜ್ಯವು ಬಹಳ ಸಮಯದಿಂದ ರಾಶಿ ಬಿದ್ದಿರಬೇಕು.
ನದಿಯ ದಡದಲ್ಲಿ ವಾಸಿಸುವ ಜನರು ಇವುಗಳನ್ನೆಲ್ಲಾ ನದಿಗೆ ಎಸೆಯುತ್ತಾರೆ.
ಮ್ಯಾಂಗ್ರೋವ್‌ಗಳು ಪರಿಸರ ವ್ಯವಸ್ಥೆಗೆ ಮುಖ್ಯವಾಗಿವೆ ಮತ್ತು ಇವು ಸಮುದ್ರದಿಂದ ಭೂಮಿಯನ್ನು ರಕ್ಷಿಸುತ್ತವೆ! ಹೀಗಾಗಿ ಅವುಗಳ ಬಗ್ಗೆ ಕಾಳಜಿ ವಹಿಸಬೇಕು.
ಉತ್ತಮ ಉದ್ದೇಶದೊಂದಿಗೆ, ಗೋಣಿ ಚೀಲದೊಂದಿಗೆ ಸಿದ್ದನಾಗಿ...
...ರಾಹುಲ್ ತನ್ನ ಭಾನುವಾರಗಳನ್ನು ಅಸ್ತರಂಗದಲ್ಲಿ ಕಳೆಯತೊಡಗಿದರು.


ಅವರ ಪ್ರಯತ್ನಗಳು ಸಾರ್ವಜನಿಕರ ಗಮನ ಸೆಳೆದವು. 8 ಜನವರಿ, 2022 ರಂದು, ಇವರು ತಮ್ಮ ಮೊದಲ ಸ್ವಚ್ಛತಾ ಅಭಿಯಾನವನ್ನು ನಡೆಸಿದರು, ಇದರಲ್ಲಿ ಅನೇಕ ಸ್ವಯಂಸೇವಕರು ಭಾಗವಹಿಸಿದರು.
ನಿಮ್ಮ ಪ್ರಯತ್ನಗಳಿಗೆ ಧನ್ಯವಾದಗಳು, ಎಲ್ಲರಿಗೂ! ನಾವು ಈ ದಿನ ಉತ್ತಮ ಕೆಲಸವನ್ನು ಮಾಡಿದ್ದೇವೆ.
ಹುರ್ರೇ!
ಈಗ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿರುವ ರಾಹುಲ್ ಇನ್ನೂ ತಮ್ಮ ಗುರಿಗೆ ಬದ್ಧರಾಗಿದ್ದಾರೆ.
ಈ ಸ್ವಚ್ಛತಾ ಯೋಜನೆಗಳಿಗಾಗಿ ಸಮಯ ಮಾಡಿಕೊಳ್ಳುವುದು ಮತ್ತು ಹಣ ಸೇರಿಸುವುದು ಕಷ್ಟವಲ್ಲವೇ?
ನನ್ನ ಬಹುಪಾಲು ಸಂಬಳವನ್ನು ಈ ಯೋಜನೆಗಾಗಿ ಖರ್ಚು ಮಾಡುತ್ತೇನೆ. ಒಂದೊಳ್ಳೆಯ ಬದಲಾವಣೆ ತರುವಂತಹ ಕೆಲಸ ಮಾಡುವುದು ಒಳ್ಳೆಯದು ಎಂದು ಅನಿಸುತ್ತದೆ. ನನ್ನ ಹೆತ್ತವರು ಸಹ ಬೆಂಬಲ ನೀಡುತ್ತಿದ್ದಾರೆ.
ರಾಹುಲ್ ಇಲ್ಲಿಯವರೆಗೆ ಜೌಗು ಪ್ರದೇಶದ ಪುನಃಸ್ಥಾಪನೆ ಕೆಲಸವನ್ನು ಪ್ರತಿಪಾದಿಸುತ್ತಿದ್ದಾರೆ.
ನಾವು ಈ ಮ್ಯಾಂಗ್ರೋವ್ ಗಳನ್ನು ನೆಡುತ್ತಿರುವ ಬಗ್ಗೆ ನನಗೆ ಖುಷಿ ಇದೆ.
ಅವು ಸಂಪೂರ್ಣವಾಗಿ ಬೆಳೆದಾಗ, ಅವುಗಳ ಜೀವವೈವಿಧ್ಯತೆಯಿಂದ ತುಂಬಿರುತ್ತವೆ ಮತ್ತು ಕರಾವಳಿಯನ್ನು ರಕ್ಷಿಸುತ್ತವೆ.
ಇದುವರೆಗೆ ರಾಹುಲ್ 2,250 ಕೆಜಿ ತ್ಯಾಜ್ಯವನ್ನು ತೆರವುಗೊಳಿಸಿದ್ದಾರೆ.
ಜನರು ಕಸ ಹಾಕುತ್ತಲೇ ಹೋದರೆ ಈ ತೂಕ ಹೆಚ್ಚುತ್ತಲೇ ಹೋಗುತ್ತದೆ. ಪರಿಸರ ಉಳಿಸುವಲ್ಲಿ ಪ್ರತಿಯೊಬ್ಬರೂ ತಮ್ಮ ಪಾತ್ರವನ್ನು ನಿರ್ವಹಿಸಿದರೆ, ಅದು ಖಂಡಿತವಾಗಿಯೂ ಅಭಿವೃದ್ಧಿ ಹೊಂದುತ್ತದೆ.



# ಮನ್ ಕೀ ಬಾತ್

## ಸಂಪುಟ 4

ಪ್ರಧಾನಿ ನರೇಂದ್ರ ಮೋದಿಯವರ ರೇಡಿಯೋ ಕಾರ್ಯಕ್ರಮ ಮನ್ ಕೀ ಬಾತ್‌ನಮ್ಮ ನಡುವೆ ಸಾಮಾನ್ಯರಂತೆ ಬದುಕುತ್ತಿರುವ ಇಂತಹ ಅಸಾಧಾರಣ ಹೀರೋಗಳನ್ನು ಗುರುತಿಸಿ, ಅವರ ಬಗ್ಗೆ ತಿಳಿಸಿ ಕೊಡುತ್ತದೆ. ಅವರ ಗುರಿ ಸಾಧನೆಯ ಛಲವನ್ನು ಮತ್ತು ಮತ್ತೊಬ್ಬರಿಗೆ ಒಳ್ಳೆಯದನ್ನು ಮಾಡಬೇಕೆನ್ನುವ ಅವರ ಹೃದಯ ವೈಶಾಲ್ಯವನ್ನು ಕೊಂಡಾಡುತ್ತದೆ.

ಇಂತಹ ವ್ಯಕ್ತಿಗಳಲ್ಲೊಬ್ಬರಾದ ದೀಪಮಾಲಾ ಪಾಂಡೆಯವರನ್ನು ನಾವೀಗ ಭೇಟಿಯಾಗೋಣ. ದೀಪಮಾಲಾರವರು ಶಾಲೆಯೊಂದರ ಮುಖ್ಯೋಪಾಧ್ಯಾಯಿನಿ. ಅವರಿಗೆ ಎಲ್ಲ ಬಗೆಯ ಮಕ್ಕಳನ್ನು ಒಳಗೊಳ್ಳುವ ಶಿಕ್ಷಣ ವಿಧಾನಗಳ ಬಗ್ಗೆ ವಿಪರೀತ ಆಸಕ್ತಿ. ವಿಶೇಷಚೇತನ ಮಕ್ಕಳಿಗೆ ನೆರವಾಗುವ ನಿಟ್ಟಿನಲ್ಲಿ ಅವರು ಪ್ರಾರಂಭಿಸಿದ 'ಒಬ್ಬ ಉಪಾಧ್ಯಾಯರು, ಒಂದು ಕರೆ' (ಒನ್ಟೀಚರ್‌ಒನ್ಕಾಲ್) ಕಾರ್ಯಕ್ರಮವು ನಿಧಾನವಾಗಿಯಾದರೂ, ಖಂಡಿತವಾಗಿಯೂ ಇನ್ನಿತರ ಮಕ್ಕಳಿಗೆ ಸಿಗುವ ಉತ್ತಮ ಗುಣಮಟ್ಟದ ಶಿಕ್ಷಣವನ್ನು ವಿಶೇಷಚೇತನ ಮಕ್ಕಳಿಗೂ ದೊರಕುವಂತೆ ಮಾಡುವಲ್ಲಿ ಬಹಳ ಯಶಸ್ವಿಯಾಗುತ್ತಿದೆ.

ಸೂರ್ಯನ ಪ್ರಕಾಶವನ್ನು ಧಾರಾಳವಾಗಿ ಪಡೆಯುವ ಸೌಭಾಗ್ಯ ಭಾರತ ದೇಶದ್ದು. ಆದರೂ, ಬಹುತೇಕ ಭಾರತೀಯರು ವಿಟಮಿನ್ ಡಿ ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಿದ್ದಾರೆ ಎಂಬ ವಿಶಯ ನಿಮಗೆ ತಿಳಿದಿದೆಯೇ? ರೈತರಾಗಿರುವ ಚಿಂತಲ ವೆಂಕಟ ರೆಡ್ಡಿಯವರನ್ನು ಈ ಪ್ರಶ್ನೆ ಬಹಳವಾಗಿ ಕಾಡಿತು. ಅವರು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯೋಗಾತ್ಮಕವಾಗಿ ವಿಟಮಿನ್ಡಿ ಪೌಷ್ಟಿಕಾಂಶತೆಯನ್ನು ಹೊಂದಿರುವ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸಿದರು.

ಇತ್ತೀಚಿನ ದಿನಗಳಲ್ಲಿ ಯಾವುದೇ ವಿಶಯದ ಬಗ್ಗೆ ಸಂಶೋಧನೆ ಮಾಡಬೇಕಾದರೆ ಅದನ್ನು ಅಂತರ್ಜಾಲದಲ್ಲಿ ಕೆಲವೇ ಕೆಲವು ಬಾರಿ ಕ್ಲಿಕ್ ಮಾಡಿ ವಿಷಯಗಳನ್ನು ಸಂಗ್ರಹಿಸಬಹುದು. ಆದರೆ, ಅಂತರ್ಜಾಲ ಸೌಲಭ್ಯ ಎಲ್ಲರಿಗೂ ಸುಲಭವಾಗಿ ಲಭ್ಯವಿರುವುದಿಲ್ಲ. ತನ್ನ ಹಳ್ಳಿಯ ಜನತೆಗೆ ಅಂತರ್ಜಾಲದ ಸೌಲಭ್ಯವನ್ನು ದೊರಕಿಸಿ ಕೊಟ್ಟ ಓಂ ಪ್ರಕಾಶ್ ಸಿಂಗ್‌ರವರ ಬಗ್ಗೆ ಓದಿ ತಿಳಿದುಕೊಳ್ಳಿ.

ಮನ್ ಕೀ ಬಾತ್‌ನ ನಾಲ್ಕನೆಯ ಸಂಚಿಕೆಯು ನಿಮ್ಮ ಆಸಕ್ತಿಯನ್ನು ಕೆರಳಿಸುವ, ಹೊಸ ಮಾಹಿತಿ, ವಿಚಾರಗಳನ್ನು ತಿಳಿಸುವ ಮತ್ತು ನಿಮ್ಮನ್ನು ಹುರಿದುಂಬಿಸುವಂತಹ ಹನ್ನೊಂದು ಹೊಸ ಕಥೆಗಳನ್ನು ನಿಮಗಾಗಿ ನೀಡುತ್ತದೆ.



₹99

www.amarchitrakatha.com
ISBN 978-81-19596-13-3
9 788119 596133